ದಿನಾಂಕ: 21.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : ವಾದಿ ಪರ ಶ್ರೀ. ಎಮ್ ಎಚ್ ಕೆ ವಕೀಲರಿಂದ**

1) ಹುಸೇನಬಿ ರಾಜಬಿ ಮುಲ್ಲಾ ನನಗೆ ಸಂಬಂದ ಇರುವುದಿಲ್ಲ. ಸದರಿ ಹುಸೇನಬಿಗೆ ಖಾತುನಬಿ ಎಂಬ ಮಗಳು ಎಂದರೆ ಸರಿ. ಖಾತುನಬಿಗೆ ಹುಸೇನಸಾಬನೊಂದಿಗೆ ಮದುವೆ ಮಾಡಿದ್ದಾರೆ ಎಂದರೆ ಸರಿ. ಖಾತುನಬಿಗೆ ಒಬ್ಬ ಯಾಸಿನಖಾನ ಸಾಕು ಮಗ ಎಂದು ಮಾಡಿದ್ದರು ಎಂದರೆ ಸರಿ. ಹುಸೇನಬಿಗೆ ಇಬ್ಬರೂ ಹೆಣ್ಣು ಮಕ್ಕಳು ಎಂದರೆ ಸರಿ. ಯಾಸಿನಖಾನನ ಮೇಲೆ ಖಾತುನಬಿ ಅವರು ಪ್ರೀತಿ, ವಿಶ್ವಾಸ ಇಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹುಸೇನಬಿ ಮುಲ್ಲಾ ಅವರು ತನ್ನ ಜೀವಿತಾ ಅವಧಿಯಲ್ಲಿ ಯಾವುದೇ ಮೃತ್ಯು ಪತ್ರವನ್ನು ಮಾಡಿಲ್ಲ ಎಂದರೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಮೃತ್ಯು ಪತ್ರವನ್ನು 1935 ಇಸವಿಯಲ್ಲಿ ಮಾಡಿರುತ್ತಾರೆ. ಸದರಿ ಮೃತ್ಯು ಪತ್ರದ ಮೇಲೆ ಯಾವ ಯಾವ ಸರ್ವೆ ನಂಬರ ಇದೆ ಎಂದು ಹೇಳಲು ಬರುತ್ತಾ ಎಂದರೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮೃತ್ಯು ಪತ್ರವನ್ನು ಯಾಸಿನಖಾನನಿಗೆ ಮಾಡಿರುತ್ತಾರೆ. ಹಿಬಾಬಿಲ್ ಇವಾಜನು ಹುಸೇನಬಿಗೆ ಮಾಡಿರುತ್ತಾರೆ. ಹಿಬಾಬಿಲ್ ಇವಾಜ ಮಾಡುವ ಸಮಯದಲ್ಲಿ 1935 ರ ಇಸವಿಯಲ್ಲಿ ಮಾಡಿದಂತಹ ಮೃತ್ಯು ಪತ್ರವನ್ನು ರದ್ದು ಮಾಡಿದ್ದಾರೋ ಇಲ್ಲವೋ ಎಂದರೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಹಿಬಾಬಿಲ್ ಇವಾಜ ಯಾವ ದಾಖಲೆ ಎಂದರೆ ಖರೀದಿ ಕಾಗದ ಎಂದು ಉತ್ತರಿಸುತ್ತಾರೆ. ಹಿಬಾಬಿಲ್ ಇವಾಜನಲ್ಲಿ ಐದು ಸರ್ವೆ ನಂಬರಗಳು ಇರುತ್ತವೆ. ಹಿಬಾಬಿಲ್ ಇವಾಜ

1940 ರಲ್ಲಿ ಆಗಿರುತ್ತದೆ. ಹಿಬಾಬಿಲ್ ಇವಾಜ ಯಾಸಿನಖಾನನಿಗೆ ಮಾಡಿಕೊಟ್ಟಿರುತ್ತಾರೆ. ಹುಸೇನಬಿ, ಹಿಬಾಬಿಲ್ ಇವಾಜನಿಗೆ ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹುಸೇನಬಿಗೆ ಇಬ್ಬರೂ ಹೆಣ್ಣು ಮಕ್ಕಳು ಅವರ ವಾರಸುದಾರರು ವಾದಿಯರು ಮತ್ತು 1 ರಿಂದ 6 ನೇ ಪ್ರತಿವಾದಿಯರು ಎಂದರೆ ಸರಿ.

2) ದಾವಾದ ಜಮೀನುಗಳು ವಾದಿಯರು ಮತ್ತು 1 ರಿಂದ 6 ನೇ ಪ್ರತಿವಾದಿಯರ ಕಬ್ಜೆಯಲ್ಲಿ ಇದೆ ಎಂದರೆ ಸರಿಯಲ್ಲ. ಹಿಬಾಬಿಲ್ ಇವಾಜನು 1940 ರಲ್ಲಿ ಹುಸೇನಬಿ ಬರೆಸಿ ಅದರಲ್ಲಿ ಇರುವಂತಹ ಜಮೀನುಗಳ ಕಬ್ಜೆಗಳನ್ನು ಯಾಸಿನಖಾನನಿಗೆ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹುಸೇನಬಿಗೆ ಇಬ್ಬರೂ ಹೆಣ್ಣು ಮಕ್ಕಳು ಇದ್ದಾರೆ. ಆ ಕಾರಣಕ್ಕೆ ಹಿಬಾಬಿಲ್ ಇವಾಜ ಮೃತ್ಯು ಪತ್ರ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಹುಸೇನಬಿ ಇಬ್ಬರೂ ಹೆಣ್ಣು ಮಕ್ಕಳು ಇದ್ದರು ಯಾಸಿನಖಾನನು ಸಾಕು ಮಗ ಆದ್ದರಿಂದ ಆತನ ಮೇಲೆ ಪ್ರೀತಿ ವಿಶ್ವಾಸ ಇರಲಿಲ್ಲ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,
Sd/-
ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ